KAN 401.2 **Reg. No. ................................**

## ಕ್ರೆಡಿಟ್ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ ಏಪ್ರಿಲ್ 2012
## ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

**I.** ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **1x5=5**

1) ಕುರುರಾಜಂ ವಿದ್ಯಾಧರ
ಕರಣದೆ ನೆಗದಂಬರಕ್ಕೆ ಗದೆಯಂ ಕ್ರಮದಿಂ
ತಿರಿಪೆ ಧರಾಚಕ್ರಂ ಕೋ
ವರ ಚಕ್ರಂ ತಿರಿವ ತೆರದೆ ತಿರಿದತ್ತೆನಸುಂ

<u>ಅಥವಾ</u>

2) ಕಷ್ಟ ಸುಕ ಏನ್ ಬಂದ್ರೂನೆ
ನಿನ್ಗೆ ನಾನೆ ನನ್ಗೆ ನೀನೆ
ಮುಳುಗೋನ್ ಬೆನ್ನಿನ್ ಬೆಂಡಿದ್ದಂಗೆ
ನಿಂಗ್ ನೆಪ್ಪಿರಲಿ ನಂಜಿ!

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಆ ಸಾಲುಗಳ ಸ್ವಾರಸ್ಯವನ್ನು ವಿಶದಪಡಿಸಿರಿ. **2×3=6**

1) ನಿನ್ನೀ ಕೇಶಪಾಶಂ ಕುರುಕುಲಪತಿಗಾಯ್ತಲ್ತೆ ಕೀ ನಾಶಪಾಶಂ
2) ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
3) ಚಿತ್ರಗುಪ್ತನಿಗಿದೆಯೆ ಮೇಲು ಕೀಳಿನ ಭೇದ?

ಇ) ಒಂದು ಪ್ರಶ್ನೆಗೆ ಉತ್ತರಿಸಿ. **1x10=10**

1) ರನ್ನನ ಭೀಮನು ಪ್ರತಿಜ್ಞೆಯನ್ನು ಪೂರೈಸಿಕೊಂಡ ಸನ್ನಿವೇಶವನ್ನು ವಿವರಿಸಿ.
2) ಮಾನವನ ಬಾಳಿನಲ್ಲಿ ದುರಂತ ಪ್ರಸಂಗ 'ಕರಿಸಿದ್ಧ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

ಈ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ. **1x7=7**

1) ಶಿವನು ಭಕ್ತಿಪ್ರಿಯ ಎಂಬುದನ್ನು ಬಸವಣ್ಣನವರು ವಚನಗಳಲ್ಲಿ ಹೇಗೆ ಚಿತ್ರಿಸಿದ್ದಾರೆ?
2) 'ನಿಂಗ್ ನೆಪ್ಪೃತ ನಂಜಿ' ಕವನದ ಆಶಯವನ್ನು ವಿವರಿಸಿ.

**II.** ಅ) ಒಂದಕ್ಕೆ ಉತ್ತರಿಸಿ. **1x10=10**

1) ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿಯ ಕುರಿತು ಲೇಖಕರ ಅಭಿಪ್ರಾಯವೇನು? ವಿವರಿಸಿ.
2) ನೀರಿನ ಮಹತ್ವದ ಕುರಿತು ನಿಮ್ಮ ಚಿಂತನೆಗಳನ್ನು ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. **1x7=7**

1) ಮನುಷ್ಯರು ಮತ್ತು ಹಕ್ಕಿಯ ಸ್ನೇಹದಿಂದ ಉಂಟಾದ ದುರಂತವನ್ನು ನಾವು ಕೊಂದ ಹಕ್ಕಿ ಪ್ರಬಂಧದಲ್ಲಿ ಹೇಗೆ ಚಿತ್ರಿಸಲಾಗಿದೆ?
2) ಪ್ಲಾಸ್ಟಿಕ್ ಬಳಕೆಯಿಂದಾಗುವ ಪರಿಣಾಮಗಳ ಕುರಿತು ಬರೆಯಿರಿ.

**III.** ಅ) ಒಂದಕ್ಕೆ ಉತ್ತರಿಸಿರಿ. **1x10=10**

1) ಲಕ್ಷದ್ವೀಪದ ಸಾಮಾಜಿಕ ಬದುಕನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ? ವಿವರಿಸಿರಿ.
2) ಪಿಟ್ಟಿ ದ್ವೀಪದ ಪಯಣದ ಅನುಭವ ಹೇಗೆ ನಿರೂಪಿತವಾಗಿದೆ? ವಿವರಿಸಿ.

ಆ) ಒಂದಕ್ಕೆ ಉತ್ತರಿಸಿ. 1x5=5

1) ಲಕ್ಷದ್ವೀಪದ ಇತಿಹಾಸವನ್ನು ತಿಳಿಸಿರಿ.

2) ಲಕ್ಷದ್ವೀಪದ ಮಹಿಳೆಯರ ವೈಶಿಷ್ಟ್ಯಗಳನ್ನು ತಿಳಿಸಿರಿ.

IV. ಅ) ಒಂದಕ್ಕೆ ಉತ್ತರಿಸಿ. 1x6=6

1) ಆಡಳಿತ ಪತ್ರದ ಸಾಮಾನ್ಯ ಸ್ವರೂಪವನ್ನು ಮಾದರಿಯೊಂದಿಗೆ ಬರೆಯಿರಿ.

2) ಸುತ್ತೋಲೆಯ ಸ್ವರೂಪವನ್ನು ಉದಾಹರಣೆಯೊಂದಿಗೆ ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1x3=3

1) ಭಾವವಾಚಕಗಳಲ್ಲಿ 'ತೆ'ಯ ಮಿತಿಮೀರಿದ ಹಾವಳಿಯ ಕುರಿತು ಬರೆಯಿರಿ.

2) ಅರೆ ಸರಕಾರಿ ಪತ್ರವನ್ನು ಯಾವ ಸಂದರ್ಭಗಳಲ್ಲಿ ಬರೆಯಲಾಗುತ್ತದೆ?

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. 2x3=6

1) ಕುವೆಂಪು

2) ಪೂರ್ಣಚಂದ್ರ ತೇಜಸ್ವಿ

3) ಬಲರಾಮ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ. 1x5=5

1) ಬಸವಣ್ಣನು ಹುಟ್ಟಿಧ ಊರು ಯಾವುದು?

2) 'ಅಜಿತ ಪುರಾಣ' ಯಾರ ಕೃತಿ?

3) ಕರಿಸಿದ್ಧನ ಮಡದಿ ಯಾರು?

4) ಒಳವಿಳಾಸ ಎಂದರೇನು?

5) ಕೋಟ್ಯಾಂತರ – ಪದ ಸರಿಯೋ ತಪ್ಪೋ ತಿಳಿಸಿರಿ.

******************

KAN 401.2 Reg. No. ..................................

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

ಏಪ್ರಿಲ್ 2013

ಕನ್ನಡ ಭಾಷಾ ಪತ್ರಿಕೆ - IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯ ಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ. 05

1) ಇಡೆ ತೊಡೆಯನುಡಿದು ನೆಟ್ಟನೆ
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ
ಬಿಡೆನೆಂಬ ತೆರದೆ ಕುಲಗಿರಿ
ಕೆಡೆವಂದದೆ ಕೆಡೆದು ಕೌರವೇಂದ್ರಂ ಮಡಿದಂ

2) ನೀ ಮನೆಗ್ ಒಸದಾಗ್ ಬಂದೋಳಂತ
ನಿನ್ ಮೊಕಾನೆ ನೋಡಿಕ್ಕೋಂತ
ಅವ್ರೊತ್ ಚಾಕ್ರೀಗ್ ಓಗ್ನೇನಿಲ್ಲ
ನಿಂಗೆ ನೆಪ್ಪೈತ ನಂಜಿ?

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ. 06

1) ನಿನ್ನೀ ಕೇಶಪಾಶಂ ಕುರುಕುಲಪತಿಗಾಯ್ತಲ್ತೆ ಕೀನಾಶಪಾಶಂ
2) ಆ ಸಗರ ಕಾರ್ತವೀರ್ಯರೊಂದು ಕ್ಷಣದಲ್ಲಿ ಮಡಿದರು.
3) ಚಿತ್ರಗುಪ್ತನಿಗಿದೆಯೆ ಮೇಲು ಕೀಳಿನ ಭೇದ?

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ರನ್ನನು ದುರ್ಯೋಧನನ ಅವಸಾನ ಪ್ರಸಂಗವನ್ನು ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.
2) ಮಾನವನ ಬಾಳಿನ ದುರಂತ ಪ್ರಸಂಗ 'ಕರಿ ಸಿದ್ಧ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) ಬಸವಣ್ಣನ ವಚನಗಳಲ್ಲಿ ಭಗವಂತನ ಸ್ವರೂಪ ಹೇಗೆ ನಿರೂಪಿತವಾಗಿದೆ?
2) 'ನಿಂಗ್ ನೆಪ್ಪೈತ ನಂಜಿ' ಕವಿತೆಯ ಆಶಯವನ್ನು ವಿವರಿಸಿರಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ಧರ್ಮವೊಂದಕ್ಕೆ ಇರುವ ಸಾಮಾಜಿಕ ಜವಾಬ್ದಾರಿಗಳು ಯಾವುವು? ಜಿ.ಎಸ್.ಶಿವರುದ್ರಪ್ಪನವರ ನಿಲುವುಗಳನ್ನು ವಿವರಿಸಿರಿ.
2) ಮನುಷ್ಯ ಹಾಗೂ ಪ್ರಕೃತಿಯ ಸಂಬಂಧ 'ನಾವು ಕೊಂದ ಹಕ್ಕಿ' ಪ್ರಬಂಧದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) ಗದ್ದೆ ಗೊರವ ಹಕ್ಕಿಯ ದುರಂತವನ್ನು ತೇಜಸ್ವಿ ಹೇಗೆ ಚಿತ್ರಿಸಿದ್ದಾರೆ?
2) ನೀರಿನ ಮಹತ್ವದ ಕುರಿತು ಪ್ರಬಂಧವನ್ನು ಬರೆಯಿರಿ.

III. ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ:** **06**

1) ಸರಕಾರಿ ಪತ್ರದ ಪ್ರಮುಖ ಅಂಗಗಳನ್ನು ಬರೆಯಿರಿ.
2) ಸುತ್ತೋಲೆ ಎಂದರೇನು? ಉದಾಹರಣೆಯೊಂದಿಗೆ ಸುತ್ತೋಲೆಯ ಸ್ವರೂಪವನ್ನು ವಿವರಿಸಿರಿ.

ಆ) **ಒಂದು ಪ್ರಶ್ನೆಗೆ ಉತ್ತರಿಸಿರಿ:** **03**

1) ಅರೆ ಸರ್ಕಾರಿ ಪತ್ರವನ್ನು ಯಾವೆಲ್ಲ ಸಂದರ್ಭಗಳಲ್ಲಿ ಬರೆಯಲಾಗುತ್ತದೆ?
2) ಸಂಧಿದೋಷಗಳ ಬಗ್ಗೆ ಬರೆಯಿರಿ.

IV. ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ.** **10**

1) 'ಲಕ್ಷದ್ವೀಪದ ನಿವಾಸಿಗಳು ಕಡಲ ಸಾಹಸಿಗಳು' – ಈ ಅಭಿಪ್ರಾಯವನ್ನು ವಿವರಿಸಿರಿ.
2) ಲಕ್ಷದ್ವೀಪದ ಐತಿಹಾಸಿಕ ಹಿನ್ನೆಲೆ ಮತ್ತು ವರ್ತಮಾನ ಸ್ಥಿತಿಗಳ ಕುರಿತು ಲೇಖಕರ ಚಿಂತನೆಗಳನ್ನು ವಿವರಿಸಿರಿ.

ಆ) **ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ.** **05**

1) ಗಣೇಶ ಗನಿಕೋಯಾ ಆದ ಸನ್ನಿವೇಶವನ್ನು ವಿವರಿಸಿರಿ.
2) ಚಿಕನ್ ನೆಕ್ ಪ್ರದೇಶದ ಸೌಂದರ್ಯವನ್ನು ನಿರೂಪಿಸಿರಿ.

V. ಅ) **ಎರಡಕ್ಕೆ ಟಿಪ್ಪಣಿ ಬರೆಯಿರಿ.** **06**

1) ಜಿ.ಪಿ. ರಾಜರತ್ನಂ
2) ಬಲರಾಮ
3) ಕುವೆಂಪು

ಆ) **ಒಂದು ವಾಕ್ಯದಲ್ಲಿ ಉತ್ತರಿಸಿರಿ.** **05**

1) 'ಅಜಿತ ಪುರಾಣ' ಯಾರ ಕೃತಿಯಾಗಿದೆ?
2) ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಕವಿ ಯಾರು?
3) ನಿರ್+ಅಪರಾಧಿ ಸೇರಿದಾಗ ಉಂಟಾಗುವ ಪದ ಯಾವುದು?
4) ಒಳವಿಳಾಸ ಎಂದರೇನು?
5) ಪರಿಸರದ ಕತೆ – ಕೃತಿಯ ಲೇಖಕ ಯಾರು?

*********************

KAN 401.2 Reg. No. ..................................

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

ಏಪ್ರಿಲ್ 2014

ಕನ್ನಡ ಭಾಷಾ ಪತ್ರಿಕೆ – IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯ ಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ: **05**

1) ಗದೆಗದೆಯಂ ಘಟ್ಟಿಸೆ ಪು
ಟ್ಟಿದ ಕೆಂಡದ ಕಿಡಿಯ ತಂಡವೆಂಟುಂ ದೆಸೆಯಿಂದ
ಪುದಿಯೆ ಪದಧೂಳಿ ಗಗನದೊ
ಳೊದವೆ ಸುರರ್ ಬೆದಱ ಕಾದಿದರ್ ಕಡುಗಲಿಗಳ್

2) ಲಗ್ನಕ್ ಮುಂಚೆ ತ್ವಾಟಕ್ ಓಗಿ
ಊವ ಕಿತ್ತಿ ನಿಂಗೆ ಕೂಗಿ
ನನ್ ನಂಜೀಂತ ನಾ ಮುಡಿಸಿದ್ದು
ನಿಂಗ್ ನೆಪ್ಪೈತ ನಂಜಿ?

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ: **06**

1) ಎಲ್ಲಿಯ ಬಲದೇವಂ ಮತ್ತೆಲ್ಲಿಯ ಸತ್ಯ ವ್ಯವಸ್ಥೆ
2) ಜಗವನಿಕ್ಷೇಪಿಸಿದ ಕುಕ್ಷಿಯಲ್ಲಿ, ಅಕ್ಷಯನಗಣಿತನು
3) ನರಭಕ್ತಿಯಳಿದರೆ ಎಲ್ಲಿ ಹರಶಕ್ತಿ?

ಇ) ಒಂದು ಪ್ರಶ್ನೆಗೆ ಉತ್ತರಿಸಿ: **10**

1) ದುರ್ಯೋಧನ ಹಾಗೂ ಭೀಮಸೇನರ ನಡುವೆ ನಡೆದ ಗದಾಯುದ್ಧದ ಸನ್ನಿವೇಶವನ್ನು ಚಿತ್ರಿಸಿರಿ.
2) ಕರಿಸಿದ್ಧ ಕವನದಲ್ಲಿ ಚಿತ್ರಿತವಾಗಿರುವ ದುರಂತ ಪ್ರಸಂಗವನ್ನು ಚಿತ್ರಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: **07**

1) ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಭಗವಂತನ ಸ್ವರೂಪವನ್ನು ನಿರೂಪಿಸಿರಿ.
2) 'ನಿಂಗ್ ನೆಪ್ಪೈತ ನಂಜಿ' ಕವನದ ಆಶಯವನ್ನು ವಿವರಿಸಿರಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: **10**

1) 'ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿ'–ಲೇಖನದಲ್ಲಿ ವ್ಯಕ್ತವಾಗಿರುವ ಲೇಖಕರ ಚಿಂತನೆಗಳನ್ನು ವಿವರಿಸಿರಿ.
2) ಮನುಷ್ಯ–ಪಕ್ಷಿಯ ನಡುವಣ ಸ್ನೇಹ ವಿಶ್ವಾಸಗಳು ದುರಂತದಲ್ಲಿ ಅಂತ್ಯವಾಗುವ ಸನ್ನಿವೇಶ–'ನಾವು ಕೊಂದ ಹಕ್ಕಿ' ಲೇಖನದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: **07**

1) 'ನಾವು ಕೊಂದ ಹಕ್ಕಿ' ಲೇಖನದಲ್ಲಿ ಬಬ್ಬುವಿನ ವ್ಯಕ್ತಿತ್ವ ಚಿತ್ರಣಗೊಂಡ ಬಗೆಯನ್ನು ವಿವರಿಸಿರಿ.
2) ಜಲ ಸಂರಕ್ಷಣೆಯ ಕುರಿತು ಪ್ರಬಂಧ ಬರೆಯಿರಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 06

1) ಸರಕಾರಿ ಪತ್ರದ ಪ್ರಮುಖ ಅಂಗಗಳನ್ನು ವಿವರಿಸಿರಿ.
2) ಅರೆ ಸರಕಾರಿ ಪತ್ರವನ್ನು ಉದಾಹರಣೆಯೊಂದಿಗೆ ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 03

1) ಸುತ್ತೋಲೆಯ ಸ್ವರೂಪವನ್ನು ವಿವರಿಸಿರಿ.
2) ಭಾವವಾಚಕಗಳಲ್ಲಿ 'ತೆ'ಯ ಮಿತಿಮೀರಿದ ಹಾವಳಿಯ ಕುರಿತು ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ: 10

1) ಲಕ್ಷದ್ವೀಪದಲ್ಲಿನ ಪ್ರಾಣಿಲೋಕವನ್ನು ಕುರಿತು ಬರೆಯಿರಿ.
2) ಗಣೇಶ ಗನಿಕೋಯ ಆದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ: 05

1) ಲಕ್ಷದ್ವೀಪದಲ್ಲಿನ ಕಡಲ ಸಾಹಸಿಗಳ ಕುರಿತು ಬರೆಯಿರಿ.
2) ಕಾಲ್ಪೇನಿ ದ್ವೀಪದ ಸೌಂದರ್ಯವನ್ನು ವರ್ಣಿಸಿರಿ.

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: 06

1) ಕುವೆಂಪು
2) ಬಲರಾಮ
3) ಹಂಡ ನಾಯಿ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ: 05

1) ಭೀಮನ ಧನುರ್ವಿದ್ಯಾ ಗುರು ಯಾರು?
2) ಬಸವಣ್ಣನ ಜನ್ಮಗ್ರಾಮ ಯಾವುದು?
3) ಡೆಮಿ ಆಫಿಶಿಯಲ್ ಲೆಟರ್‌ಗೆ ಕನ್ನಡದಲ್ಲಿ ಏನೆನ್ನುತ್ತಾರೆ?
4) ನಿರ್+ಅಪರಾಧಿ-ರೂಪುಗೊಳ್ಳುವ ಪದವನ್ನು ಬರೆಯಿರಿ.
5) ಮಾಯಾಲೋಕ-ಯಾರ ಕಾದಂಬರಿಯಾಗಿದೆ?

**********

KAN 401.2 Reg. No. ..................................

ಕ್ರೆಡಿಟ್ ಆಧಾರಿತ ನಾಲ್ಕನೆ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

ಏಪ್ರಿಲ್ 2015

ಕನ್ನಡ ಭಾಷಾ ಪತ್ರಿಕೆ – IV

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ: 05

1) ಪಗೆ ಮಡಿದುದು ಮುಡಿಯೆನೆ ನಗೆ
ಮೊಗದಿಂ ಪಾಂಚಾಳಿ ಮರೆದೆನಾಂ ಪಲಕಾಲಂ
ವಿಗತಾಭ್ಯಾಸದೆ ಸತ್ತಿಗ
ಪಗೆಯಂ ಮಡಿಯಿಸಿದ ನೀನೆ ಮುಡಿಯಲ್ವೇಳ್ಕುಂ

2) ಏನು ತಿಳಿಯದ ಹಸುಳೆ
ಕಣ್ಣು ಬಿಡುವಂತೆ ಕೆರೆ ಮುಗ್ಧತೆಯ ತೋರಿತ್ತು
ಬೆಟ್ಟ, ಕಾನ್, ಮುಗಿಲು, ಬಾನ್, ಬಯಲು, ಕೆರೆ, ಮರ, ಬಳ್ಳಿ
ಎಲ್ಲಿ ನೋಡಿದರಲ್ಲಿ ಶ್ರೀಶಾಂತಿ ನೆಲೆಸಿತ್ತು

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ: 06

1) ಕುಲಗಿರಿ ಕೆಡೆವಂದದೆ ಕೆಡೆದು ಕೌರವೇಂದ್ರಂ ಮಡಿದಂ

2) ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಆಯಿತಯ್ಯ

3) ನನಗ್ ಇಲ್ಲಾಂತ ನೀನೂ ಒಲ್ದೆ

ಇ) ಒಂದು ಪ್ರಶ್ನೆಗೆ ಉತ್ತರಿಸಿ: 10

1) ದುರ್ಯೋಧನನ ಪಾತ್ರ ಸೃಷ್ಟಿಯಲ್ಲಿ ರನ್ನ ಪ್ರಕಟಿಸಿರುವ ನಾಟಕೀಯ ಕೌಶಲ್ಯವನ್ನು ವಿವರಿಸಿರಿ.

2) 'ನಿಂಗ್ ನೆಪ್ಪೈತ ನಂಜಿ'– ಕವನದಲ್ಲಿ ಪ್ರಕಟವಾಗಿರುವ ಪ್ರೇಮ ಭಾವವನ್ನು ವಿವರಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) 'ಕರಿಸಿದ್ಧ' ಕವಿತೆಯಲ್ಲಿ ಚಿತ್ರಿತವಾಗಿರುವ ದುರಂತ ಸನ್ನಿವೇಶವನ್ನು ನಿರೂಪಿಸಿರಿ.

2) ಭಗವಂತನ ಸ್ವರೂಪವನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ? ವಿವರಿಸಿರಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿ: 10

1) 'ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿ' ಲೇಖನದಲ್ಲಿ ವ್ಯಕ್ತವಾಗಿರುವ ಲೇಖಕರ ಆಶಯಗಳನ್ನು ವಿವೇಚಿಸಿರಿ.

2) ಪಕ್ಷಿ ಹಾಗೂ ಮನುಷ್ಯ ಸಂಬಂಧಗಳು – 'ನಾವು ಕೊಂದ ಹಕ್ಕಿ' ಲೇಖನದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: 07

1) 'ನಾವು ಕೊಂದ ಹಕ್ಕಿ' ಲೇಖನದಲ್ಲಿ ಬಬ್ಬುವಿನ ಪಾತ್ರ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

2) ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮದ ಕುರಿತು ಪ್ರಬಂಧ ಬರೆಯಿರಿ.

**III.** ಅ) ಒಂದು ಪ್ರಶ್ನೆಗೆ ಉತ್ತರಿಸಿ: **06**

1) ಸರಕಾರಿ ಪತ್ರದ ಪ್ರಮುಖ ಅಂಗಗಳನ್ನು ಪರಿಚಯಿಸಿರಿ.

2) 'ಸುತ್ತೋಲೆ' ಎಂದರೇನು? ಅದರ ಸ್ವರೂಪವನ್ನು ಉದಾಹರಣೆಯೊಂದಿಗೆ ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: **03**

1) ಅರೆ ಸರಕಾರಿ ಪತ್ರವನ್ನು ವಿವರಿಸಿರಿ.

2) ಭಾವಸೂಚಕಗಳಲ್ಲಿ 'ತೆ'ಯ ಹಾವಳಿಯ ಕುರಿತು ಬರೆಯಿರಿ.

**IV.** ಅ) ಒಂದು ಪ್ರಶ್ನೆಗೆ ಉತ್ತರಿಸಿ: **10**

1) ಲಕ್ಷದ್ವೀಪದಲ್ಲಿನ ಕಡಲ ಸಾಹಸಿಗಳ ಕುರಿತು ಬರೆಯಿರಿ.

2) ಗಣೇಶ ಗನಿಕ್ಕೋಯ ಆದ ಸನ್ನಿವೇಶವನ್ನು ನಿರೂಪಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ: **05**

1) ಲಕ್ಷದ್ವೀಪದಲ್ಲಿನ ಪ್ರಾಣಿಲೋಕವನ್ನು ಕುರಿತು ಬರೆಯಿರಿ.

2) ಕಾಲ್ಪೇನಿ ದ್ವೀಪದ ಸೌಂದರ್ಯವನ್ನು ವಿವರಿಸಿರಿ.

**V.** ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ: **06**

1) ಬಸವಣ್ಣ

2) ಗಿಡ್ಡಿ

3) ದ್ರೌಪದಿ

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: **05**

1) ಲಾಕ್ಷಾಗೇಹ – ಎಂದರೇನು?

2) 'ಲಕ್ಷದ್ವೀಪದಲ್ಲಿ' ಯಾರ ಕೃತಿ?

3) ಒಳವಿಳಾಸ ಎಂದರೇನು?

4) 'ಕರ್ವಾಲೋ' – ಯಾರ ಕಾದಂಬರಿ?

5) ಶ್ರೀ ರಾಮಾಯಣ ದರ್ಶನಂ – ಯಾರ ಕೃತಿ?

**********

KAN 402.2

ಕ್ರೆಡಿಟ್ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಏಪ್ರಿಲ್ 2016

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ ಅಂಕಗಳು: 80

I (ಅ) ಒಂದು ಪದ್ಯದ ಭಾವಾರ್ಥ, ಸ್ವಾರಸ್ಯವನ್ನು ವಿವರಿಸಿ. 5X1=05

(1) ಅಳಿಯರ್ ಕಂಡರೀಕೆಯ ಮೊಗದ ಭಾವಮಂ
ಕೇಳಿದರಿದೇನೆಲೆ ಮೃಗಾಕ್ಷಿ ತಳುವಿದೆ ಮನದ
ಬೇಳಂಬಮಾವುದುಕ್ಕುವ ಹರ್ಷರಸದೊಡನೆ ಬೆರಸಿಹುದು ಬೆದರುವೊನಲು
ಗಾಳಿ ಪರಿಮಳವನಡಗಿಪುದುಂಟೆ ತನುಚಿತ್ತ
ದಾಳಾಪಮಂ ಮಾಚಲರಿಪುದೆ ಸಾಕಿನ್ನು
ಹೇಳದೊಡೆ ಮಾಣಲಂತಸ್ಥಮದು ತಾನೆ ತುಬ್ಬುವುದುದೆಂದು ನಗುತಿರ್ದರು

(2) ಎಳೆಹಸುಳೆ ತಾಯಂದಿರು । ಹಾಲುಣಿಸಲು ಹಂಬಲಿಸಿದರೆ
ನಾಳಿನ ಪಾಳಿಯ ಸೂರಿಲ್ಲ । ಸೋರಿಹೋಗುವ ಎದೆಹಾಲು
ಬೆಳ್ಳನೆ ಲೇಸ್‌ಗಳಾಗಿ । ಕತ್ತರಿಸುತ್ತ ಚಲುವ ಬಲೆಯಾಗಿಸುತ್ತಾಳೆ
ದಿನದ ಟಾರ್ಗೆಟ್ ಮುಗಿಸಿ । ನಿಟ್ಟುಸಿರಿಡಲು ಕಾತರಿಸುತ್ತಾಳೆ.

ಆ) ಎರಡರ ಸಂದರ್ಭ, ಸ್ವಾರಸ್ಯ ವಿವರಿಸಿ 3X2=06

(1) ಸಾವಿನ ಬೆಳಕದು ಕಾಣುವದೆಂದು

(2) ಸರಕ್ಕನೆಳೆದುಕೊಂಡಿದ್ದೆ ಕೆಂಡ ತುಳಿದವನಂತೆ

(3) ಸಂಶಯದ ಗಡಿಗಳುದ್ದಕ್ಕು ಸಿಡಿಗುಂಡುಗಳ ಕದನ ನಿಂತೀತು ಹೇಗೆ?

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ 10X1=10

(1) ಚಂದ್ರಹಾಸನು ವಿಷಯೆಯನ್ನು ವಿವಾಹವಾಗುವ ಹಿನ್ನೆಲೆಯನ್ನು ವಿವರಿಸಿ.

(2) 'ರಂಗೋಲಿ ಮತ್ತು ಮಗ' ಕವನದಲ್ಲಿ ಕವಿ ನಿಸಾರ್ ಅಹಮದ್ ನೀಡುವ ಸಾಂಸ್ಕೃತಿಕ ವಿವರಗಳ ವೈಶಿಷ್ಟ್ಯವೇನು?

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7X1=07

(1) ಮಾನವನಿಗೆ ಅಹಂಕಾರ ತರವಲ್ಲ ಎಂದು ಕನಕದಾಸರು ತಿಳಿಸಿದ ರೀತಿಯನ್ನು ವಿವರಿಸಿ.

(2) 'ಪ್ರೀತಿ ಇಲ್ಲದ ಮೇಲೆ' ಕವನದ ಆಶಯವನ್ನು ಚರ್ಚಿಸಿ.

II ಅ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ. 10X1=10

(1) 'ಕುಕ್ಕುಟ ಪಿಶಾಚ'ದಲ್ಲಿ ಕಾಡುಪ್ರಾಣಿಗಳ ಅಸಾಧಾರಣ ವರ್ತನೆಗೆ ನಿರ್ದಿಷ್ಟ ಕಾರಣಗಳಿರುತ್ತವೆ ಎಂಬ ತೇಜಸ್ವಿಯವರ ಹೇಳಿಕೆ ಪ್ರತಿಪಾದಿತವಾದ ಬಗೆ ಹೇಗೆ?

(2) ಹಕ್ಕಿ ಮರಿಗಳನ್ನು ಸಾಕಿ ಫೋಟೊ ತೆಗೆಯಬೇಕೆಂಬ ತೇಜಸ್ವಿಯವರ ಹಂಬಲ ವಿಫಲವಾದುದು ಹೇಗೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ 7X1=07

(1) ನಮ್ಮನ್ನು ಆವರಿಸಿರುವ ಕುರುಡು ನಂಬಿಕೆಗಳು 'ಪ್ಯಾರನಿಗೆ ಸೈತಾನ್ ಕಾಟ' ಕತೆಯಲ್ಲಿ ವ್ಯಕ್ತವಾದ ಬಗೆ ಹೇಗೆ?

(2) ಮೂಲಿಕೆ ಬಳ್ಳಿಯ ವೈಶಿಷ್ಟ್ಯವನ್ನು ವಿವರಿಸಿ.

**III ಅ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ.** **10X1=10**

(1) ರಹಮತ್ ತರೀಕೆರೆ ಅವರ ಅಂಡಮಾನ್ ಪ್ರವಾಸದ ಉದ್ದೇಶಗಳೇನು? ಅದು ನೆರವೇರಿದ ಬಗೆ ಹೇಗೆ?

(2) ಅಂಡಮಾನ ಪ್ರದೇಶ ಜನರ ಬದುಕು, ಪರಿಸರ, ಹವಾಮಾನದ ಕುರಿತು ಲೇಖಕರ ಅಭಿಪ್ರಾಯಗಳೇನು?

**ಆ) ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7X1=07**

(1) ಬೋಟ್‌ಮನ್ ಅಶುತೋಶನ ವ್ಯಕ್ತಿತ್ವವನ್ನು ವಿವರಿಸಿ.

(2) ಕರ್ರೈನ್ ಜನಾಂಗದ ಕುರಿತು ಲೇಖಕರ ಅನುಭವಗಳೇನು?

**IV ಇ) ಒಂದು ಪ್ರಶ್ನೆಗೆ ಉತ್ತರಿಸಿ.** **3X2=06**

(1) ಉತ್ತಮ ಭಾಷಣದ ಪಂಚಸೂತ್ರಗಳನ್ನು ವಿವರಿಸಿ.

(2) ವೈಜ್ಞಾನಿಕ ಲೇಖನದ ಸ್ವರೂಪವನ್ನು ತಿಳಿಸಿ.

**V ಅ) ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ** **3X2=06**

(1) ಅಂಬಿಕಾತನಯದತ್ತ

(2) ಕನಕದಾಸರು

(3) ಮಾರ

**ಆ) ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ** **1X6=06**

(1) ಲಕ್ಷ್ಮೀಶನ ಕೃತಿಯನ್ನು ಹೆಸರಿಸಿರಿ.

(2) ನಾಕುತಂತಿ – ಇದು ಯಾರ ಕೃತಿಯಾಗಿದೆ?

(3) ನಿತ್ಯೋತ್ಸವದ ಕವಿ ಎಂದು ಯಾರನ್ನು ಕರೆಯಲಾಗುತ್ತದೆ?

(4) ರಾಮಧ್ಯಾನ ಚರಿತೆಯನ್ನು ಬರೆದವರು ಯಾರು?

(5) ಸುಸ್ಮಿತ ಯಾರು?

(6) ಶಿವರುದ್ರಪ್ಪ ಅವರ ಪೂರ್ಣ ಹೆಸರೇನು?

*****